

ಡಾ.ವಿನೋದ ಛೆಬ್ಬಿ

ಅಷ್ಟೊಂದು ಪ್ರೀತಿಸಿ ಮದುವೆಯಾದವರೂ ಜಗಳವೇಕೆ ಆಡುತ್ತಾರೆ? ದಾಂಪತ್ಯ ವಿರಸದ ಮೂಲ ಕಾರಣ ಏನಿರಬಹುದು?

# ದಾಂಪತ್ಯ ವಿರಸ

3

ದಾಂಪತ್ಯ ಅಂದರೆ ವಿರಸಕ್ಕೆ ಇನ್ನೊಂದು ಹೆಸರು ಎಂದು ಖ್ಯಾತಿ ಹೊಂದುವಷ್ಟು ದಾಂಪತ್ಯವಿರಸಗಳು ಜನಜನಿತವಾಗಿವೆ.

ದಾಂಪತ್ಯದಲ್ಲಿ ಸುಖ ಎನ್ನುವುದು ಒಂದು ಮರೀಚಿಕೆ– ಎಲ್ಲರಿಗೂ ಕಾಣುತ್ತದೆ, ಯಾರಿಗೂ ಸಿಗುವುದಿಲ್ಲ;

ಗಂಡಹೆಂಡತಿ ಒಂದು ನಾಣ್ಯದ ಎರಡು ಮುಖಗಳಿದ್ದಂತೆ – ಅದಕ್ಕೇ ಇಬ್ಬರೂ ಸದಾ ವಿರುದ್ಧ ದಿಕ್ಕಿನಲ್ಲೇ ನೋಡುತ್ತಿರುತ್ತಾರೆ.

ಈ ಮುಂತಾದ 'ನಿತ್ಯಸತ್ಯ'ಗಳು ಹುಟ್ಟಿಕೊಂಡಿವೆ. ಇಷ್ಟಿದ್ದರೂ ಹೆಚ್ಚಿನವರು ಮದುವೆ ಆಗುವುದನ್ನು ಬಿಟ್ಟಿಲ್ಲ. ಅದು ಬೇರೆ ವಿಷಯ. ಈಗ ಎಲ್ಲರ ಮನೆಯ ದೋಸೆಯ ತೂತಿನ ಹಿನ್ನೆಲೆ ಹುಡುಕೋಣ.

ನನ್ನ ಬಳಿ ಬಂದ ದಂಪತಿಗಳು ಬಹುತೇಕ ಈ ವ್ಯಾವಹಾರಿಕ ಕಾರಣಗಳನ್ನು ಮುಂದೆಮಾಡಿದ್ದಾರೆ: 1) ಅನ್ಯೋನ್ಯತೆಯ ಕೊರತೆ; 2) ಲೈಂಗಿಕ ಅತೃಪ್ತಿ; 3) ಪಾರಮ್ಯಕ್ಕೆ ಪೈಪೋಟಿ (power struggle); 4) ಆರ್ಥಿಕ ಅಂಶಗಳು; 5) ಸಂಬಂಧಿಕರ ಪ್ರಭಾವ; 6) ವಿವಾಹಬಾಹಿರ ಸಂಬಂಧಗಳು; 7) ಬದುಕಿನ ಸಂಕಷ್ಟಗಳು, ರೋಗರುಜಿನಗಳು; 8) ದುರಭ್ಯಾಸಗಳು; 9) ವ್ಯಕ್ತಿತ್ವ ದೋಷಗಳು.

## ಇನ್ನು ಮನೋರಂಗದಲ್ಲಿ ಕಾರಣಗಳೇನಿರಬಹುದು?

**ಮೂಲಭೂತ ಲೈಂಗಿಕ ವ್ಯತ್ಯಾಸ:** ಜಾನ್ ಗ್ರೇ ಒಂದು ಪುಸ್ತಕ ಬರೆದಿದ್ದಾನೆ. ಅದರ ಶೀರ್ಷಿಕೆ Men Are From Mars, Women Are From Venus. ಜಗತ್ತಿನಲ್ಲಿ ಬೈಬಲ್ ನಂತರ ಅತಿ ಹೆಚ್ಚು ಪ್ರತಿಗಳು ಮಾರಾಟವಾಗಿರುವುದು ಈ ಪುಸ್ತಕದ್ದೇ ಎಂದರೆ ನೀವು ನಂಬಲಿಕ್ಕಿಲ್ಲ. ಗ್ರೇ ಪ್ರಕಾರ ಹೆಣ್ಣುಗಂಡುಗಳ ಅಭಿಪ್ರಾಯ ಭೇದಕ್ಕೆ ಕಾರಣ ಅವರಿಬ್ಬರ ನಡುವೆ ಇರುವ ಮೂಲಭೂತ ವ್ಯತ್ಯಾಸ– ಅದು ಎಷ್ಟಿದೆ ಎಂದರೆ ಇಬ್ಬರೂ ಬೇರೆಬೇರೆ ಗ್ರಹಗಳಿಂದ ಇಳಿದುಬಂದಹಾಗೆ ವರ್ತಿಸುತ್ತಾರೆ! ಗಂಡು ವ್ಯವಹಾರಿ ಆದರೆ ಹೆಣ್ಣು ಭಾವಜೀವಿ. ಗಂಡು ಕಾರ್ಯಸಾಧನೆಯ ಉದ್ದೇಶ ಇಟ್ಟುಕೊಂಡರೆ ಸಂಬಂಧಗಳಲ್ಲಿ ಭಾವನಾತ್ಮಕ ತೃಪ್ತಿಯೇ ಹೆಣ್ಣಿನ ಗುರಿ. ಗಂಡು ಲೈಂಗಿಕ ಸಂಪರ್ಕಕ್ಕಾಗಿ ಹೆಣ್ಣನ್ನು ಪ್ರೀತಿಸಿದರೆ ಹೆಣ್ಣು ಪ್ರೀತಿಗೋಸ್ಕರ ಲೈಂಗಿಕ ಸಂಪರ್ಕಕ್ಕೆ ಒಪ್ಪುತ್ತಾಳೆ. ಹೀಗೆ ಶಾರೀರಿಕ, ಭಾವನಾತ್ಮಕ, ವೈಚಾರಿಕ, ಲೈಂಗಿಕ ಇತ್ಯಾದಿ ವಿವಿಧ ಆಯಾಮಗಳಲ್ಲಿ ಇಬ್ಬರ ನಡುವೆ ತೀವ್ರವಾದ ಭಿನ್ನತೆಯಿದೆ. ಹಾಗಾಗಿ ವಿರಸವೇ ಅತ್ಯಂತ ಸಹಜ!

ಜಾನ್ ಗ್ರೇ ಅವರ ಸಿದ್ಧಾಂತ ಇಷ್ಟೊಂದು ಸರಳಸತ್ಯವಾದರೆ ಇಲ್ಲೊಂದು ಪ್ರಶ್ನೆ ಹುಟ್ಟುತ್ತದೆ: (ಸಲಿಂಗಿಗಳ ಹೊರತಾಗಿ) ಎಲ್ಲ ದಾಂಪತ್ಯಗಳು ಹೆಣ್ಣುಗಂಡುಗಳ ನಡುವೆಯೇ ನಡೆಯುತ್ತಿದ್ದರೂ ಕೆಲವು ದಾಂಪತ್ಯಗಳು ಅತಿ ಯಶಸ್ವಿಯಾಗಿವೆಯಲ್ಲ, ಅಷ್ಟೊಂದು ಅರ್ಥವತ್ತಾದ ಹೊಂದಾಣಿಕೆ ಹೇಗೆ ಸಾಧ್ಯವಾಯಿತು? ಈ ಹೆಣ್ಣುಗಂಡುಗಳು ಒಂದೇ ಗ್ರಹದಿಂದ ಬಂದವರೇ? ಈ ಪ್ರಶ್ನೆಯ ಉತ್ತರ ಗ್ರೇ ಅವರ ಸಿದ್ಧಾಂತವನ್ನು ಅಲ್ಲಾಡಿಸಿಬಿಡುತ್ತದೆ!

**ಹೊಂದಾಣಿಕೆಯ ಕೊರತೆ:** ಕಲಹಗಳು ಹೊಂದಾಣಿಕೆಯ ಕೊರತೆಯಿಂದ ಉಂಟಾಗುತ್ತವೆ ಎಂದು ಎಲ್ಲರೂ ನಂಬುತ್ತೇವೆ. ಅದು ಸರಿಯೆ, ಆದರೆ ಹೊಂದಾಣಿಕೆ ಆಗದಿರುವುದಕ್ಕೆ ಏನು ಕಾರಣ? ಅದರಲ್ಲೂ ಒಂದು ಹಂತದಲ್ಲಿ ಹೊಂದಾಣಿಕೆ ಮಾಡಿಕೊಳ್ಳುವುದಕ್ಕೆ ಇಬ್ಬರೂ ಒಪ್ಪಿದ್ದರೂ ನಂತರ ಯಾಕೆ ಹಿಂದೇಟು ಹಾಕುತ್ತಾರೆ? ಅದಕ್ಕೆ ಸ್ಪಷ್ಟ ಉತ್ತರವಿಲ್ಲ.

**ಅಹಂಭಾವಗಳ ಪೈಪೋಟಿ:** ಹೆಚ್ಚಿನವರ ಪ್ರಕಾರ ದಾಂಪತ್ಯದ ಕಲಹಗಳು ಈಗೋ ಕ್ಲ್ಯಾಷ್ ಅಂದರೆ ಅಹಂಭಾವಗಳ ತಾಕಲಾಟದ ಪರಿಣಾಮ. ತಾನು ಹೆಚ್ಚು, ತನ್ನದು ಹೆಚ್ಚು ಎನ್ನುವುದೇ ದೊಡ್ಡ ಕಾರಣ ಎಂದು ಅವರ ಅನಿಸಿಕೆ. ಹಾಗಾದರೆ, ಅಹಮಿಕೆಯನ್ನು ಬಿಟ್ಟುಕೊಟ್ಟಲ್ಲಿ ವಿರಸವೂ ನಿಲ್ಲುತ್ತದೆ ಎಂದಾಯಿತು. ಸರಿ, ಯಾರು ಬಿಟ್ಟುಕೊಡಬೇಕು ಎಂದರೆ ಒಬ್ಬರು ಇನ್ನೊಬ್ಬರ ಕಡೆಗೆ ಬೆರಳು ತೋರಿಸುತ್ತಾರೆ! ಅಂದರೆ ಇಬ್ಬರೂ ಅಹಂಭಾವ ಬಿಟ್ಟುಕೊಡದ ಹೊರತೂ ನಡೆಯುವುದಿಲ್ಲ ಎಂದಾಯಿತು. ಹಾಗಾದರೆ ಯಾರು ಮೊದಲು ಬಿಟ್ಟುಕೊಡಬೇಕು? ಒಬ್ಬರು ಬಿಟ್ಟುಕೊಟ್ಟದ್ದು ಇನ್ನೊಬ್ಬರಿಗೆ ಹೇಗೆ ಗೊತ್ತಾಗಬೇಕು? ನಾನು ಅಹಂಭಾವ ಬಿಟ್ಟಿದ್ದೇನೆ ನೋಡು ಎಂದು ಹೇಳುವುದೂ ಒಂದು ಅಹಂಭಾವದ ಲಕ್ಷಣವಲ್ಲವೆ? ಒಬ್ಬರು ಬಿಟ್ಟಮೇಲೆ ಇನ್ನೊಬ್ಬರು ತಾನು ಬಿಡುವ ಅಗತ್ಯವಿಲ್ಲ ಎಂದು ನುಣುಚಿಕೊಂಡರೆ? ಸಂಗಾತಿಗೋಸ್ಕರ ಬಿಟ್ಟ ಅಹಂ ಪುನಃ ಮರಳುವುದಿಲ್ಲ ಎನ್ನುವುದು ಎಷ್ಟು ಖಾತರಿ? ಅಹಂಭಾವವನ್ನು ಬಿಟ್ಟುಕೊಟ್ಟು ದಾಂಪತ್ಯವನ್ನು ಉಳಿಸಿಕೊಳ್ಳಲು ಯಾರೂ ಮನಸ್ಸು ಮಾಡದಿರುವುದನ್ನು ಗಮನಿಸಿದರೆ ಅದು ಅಪ್ರಜ್ಞೆಯ ರಂಗದಲ್ಲಿ ಏನೋ ಪ್ರಯೋಜನಕಾರಿ ಪಾತ್ರ ವಹಿಸುತ್ತಿದೆ ಎಂದೆನಿಸುತ್ತದೆ. ಅದೇನೆಂದು ಮುಂದೆ ನೋಡೋಣವಂತೆ.

**ಸಂವಹನದ (communication) ಕೊರತೆ:** ಇನ್ನು ಕೆಲವರ ಪ್ರಕಾರ ಸಂವಹನ ಸೂಕ್ತವಾಗಿ ನಡೆಯದಿರುವುದೇ ಕಲಹಕ್ಕೆ ಕಾರಣ. ಒಬ್ಬರು ಹೇಳಿದ್ದನ್ನು ಇನ್ನೊಬ್ಬರು ಸರಿಯಾಗಿ ಅರ್ಥಮಾಡಿಕೊಳ್ಳುವುದಿಲ್ಲ, ಹಾಗೂ ತನ್ನೊಳಗೆ ಇರುವುದನ್ನು ಇನ್ನೊಬ್ಬರಿಗೆ ಸ್ಪಷ್ಟವಾಗಿ ಅರ್ಥವಾಗುವಂತೆ ತಿಳಿಯಪಡಿಸುವುದಿಲ್ಲ. ಅದಕ್ಕಾಗಿಯೇ ಆಪ್ತ ಸಲಹೆಗಾರರು ಹೆಚ್ಚಿನಂಶ ಸಂವಹನದ ಕಡೆಗೆ ಗಮನ ಹರಿಸುತ್ತಾರೆ.

ಸಂವಹನ ಮುಖ್ಯ ಎಂದು ಒಪ್ಪಿಕೊಂಡರೂ ಗಂಡಹೆಂಡತಿ ಜಗಳಾಡುವಾಗ ಬರುವ ಕೆಲವು ಮಾತುಗಳನ್ನು ಕೇಳಿ (ಇಲ್ಲಿ ಸಂಗಾತಿಗಳು ಪರಸ್ಪರರನ್ನು ಉದ್ದೇಶಿಸುವಾಗ ನೀನು, ನಿನ್ನ ಮುಂತಾದ ಏಕವಚನದ ಪ್ರಯೋಗವನ್ನೇ ಮಾಡಿದ್ದೇನೆ. ಯಾಕೆಂದರೆ ಜಗಳದಲ್ಲೂ ಪ್ರೀತಿಯಲ್ಲೂ ನಮ್ಮ ತಲೆಯಲ್ಲಿ ಏಕವಚನವೇ ಗುಯ್ಗುಡುತ್ತದೆ!): 'ಸಾವಿರ ಸಲ ಹೇಳಿದರೂ ನನ್ನ ಮಾತು ನಿನಗೆ ಅರ್ಥವಾಗುತ್ತಿಲ್ಲ!' 'ನಿನ್ನ ಈ ವರ್ತನೆಯಿಂದ ನಾನು ರೋಸಿ ಹೋಗಿದ್ದೇನೆ.' ಇತ್ಯಾದಿ. ಇನ್ನು ಕೆಲವರು ತಮ್ಮ ಸಂಗಾತಿಗೆ ಜಾಣಕಿವುಡು – ಏನೇ ಹೇಳಿದರೂ ತಮಗೆ ಬೇಕಾದನ್ನು ಮಾತ್ರ ಆಲಿಸುತ್ತಾರೆ ಎಂದು ಆಪಾದಿಸುತ್ತಾರೆ. ಅಂದರೆ ಇಲ್ಲೆಲ್ಲ ಸಂವಹನ ನಿರರ್ಗಳವಾಗಿ ಅಷ್ಟೇ ಅಲ್ಲ, ಬೇಕಾದುದಕ್ಕಿಂತ ಹೆಚ್ಚಿಗೇ ಆಗುತ್ತಿದೆ ಎಂದಾಯಿತು. ಇನ್ನೂ ಹೇಳಬೇಕೆಂದರೆ ಜಗಳವೇ ಒಂದು ರೀತಿಯ– ಅತಿ ತೀಕ್ಷ್ಣವಾದ– ಸಂವಹನವಲ್ಲವೆ?

**ಅಪರಿಪೂರ್ಣತೆ:** ಅಮೆರಿಕೆಯ ಹಾರ್ವಿಲ್ ಹೆಂಡ್ರಿಕ್ಸ್ ಒಂದು ಸಿದ್ಧಾಂತವನ್ನು ಮುಂದಿಟ್ಟಿದ್ದಾರೆ. ಇಮಾಗೋ ಸಿದ್ಧಾಂತದ ಪ್ರಕಾರ ಹೆಣ್ಣುಗಂಡುಗಳು ಸ್ವಭಾವತಃ ಅಪರಿಪೂರ್ಣರು– ಧನಾತ್ಮಕ ಹಾಗೂ ಋಣಾತ್ಮಕ ಕಣಗಳಿದ್ದಂತೆ. ಇಬ್ಬರೂ ಸೇರಿ ಒಂದಾಗಿ ಪರಿಪೂರ್ಣತೆಯನ್ನು, ಸ್ಥಿರತೆಯನ್ನು ಸಾಧಿಸುತ್ತಾರೆ. ಒಂದಾಗುವ ಮುಂಚೆ ಆಗುವ ಪ್ರಕ್ರಿಯೆಯೇ ವಿರಸದ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಈ ಪ್ರಕ್ರಿಯೆಯನ್ನು ನಿಧಾನಿಸಿದರೆ ವಿರಸ ನಿಲ್ಲಿಸಬಹುದು. ಇಲ್ಲಿ ನನ್ನ ಪ್ರಶ್ನೆ ಏನೆಂದರೆ, ಕೆಲವರು ಸ್ವಭಾವತಃ ಪರಿಪೂರ್ಣರಾಗಿರುತ್ತಾರೆ. ಅವರು ಸಂಗಾತಿ ಹೇಗೇ ಇರಲಿ, ಮೆಚ್ಚಿಕೊಂಡು ನೆಚ್ಚಿಕೊಂಡು ಬಾಳುತ್ತಾರೆ. ಇವರ ಸ್ಥಿರತೆ, ಪರಿಪೂರ್ಣತೆ ಎಲ್ಲಿಂದ ಬಂತು? ಹೀಗೆಂದು ನಾನು ಹೆಂಡ್ರಿಕ್ಸ್ ಅವರನ್ನೇ ಸ್ವತಃ ಪ್ರಶ್ನಿಸಿದಾಗ ತೃಪ್ತಿಕರ ಉತ್ತರ ದೊರೆಯಲಿಲ್ಲ.

ಒಟ್ಟಿನಲ್ಲಿ ಈ ಮೇಲಿನ ಕಾರಣಗಳು ಸಕಾರಣಗಳಲ್ಲ, ಹೆಚ್ಚೆಂದರೆ ಅಂತರಂಗದಲ್ಲಿರುವ ಕಾರಣದ ಅಭಿವ್ಯಕ್ತಿಗಳು ಎಂದು ತೋರುತ್ತದೆ.

ಹಾಗಾದರೆ ಅಂತರಂಗದಲ್ಲಿ ಏನೋ ಕಾರಣವಿದೆ ಎಂದು ಅನ್ನಿಸುತ್ತದೆ. ಅದೇನದು? ಇದರ ಬಗೆಗೆ ಒಂದು ಜೋಕ್ ಇದೆ. ಜಗತ್ತಿನ ದಾಂಪತ್ಯ ತಜ್ಞರೆಲ್ಲ ಸೇರಿ ವಿರಸಕ್ಕೆ ಕಾರಣ ಏನೆಂದು ಕಂಡುಹಿಡಿದರಂತೆ: ವಿವಾಹವಾಗಿದ್ದೇ ವಿರಸಕ್ಕೆ ಕಾರಣ!

ವಿರಸಕ್ಕೆ ವಿವಾಹವೇ ಕಾರಣ!

ಇದೊಳ್ಳೆ ತಮಾಷೆ, ನಂಬಲಾಗುತ್ತಿಲ್ಲ ಎನ್ನಿಸುತ್ತಲ್ಲವೆ? ಆಯಿತು, ತಮಾಷೆಯನ್ನು ತೆಗೆದುಹಾಕಿ ಗಂಭೀರವಾಗಿ ಹೇಳಬೇಕೆಂದರೆ, ದಾಂಪತ್ಯ ವಿರಸಕ್ಕೆ ಪರಸ್ಪರರ ವೈವಾಹಿಕ ಆಯ್ಕೆಯೇ ಕಾರಣ!

ಇದು ಹೇಗೆ ಎನ್ನುವುದನ್ನು ಮುಂದಿನ ಸಂಚಿಕೆಯಲ್ಲಿ ವಿವರಿಸುತ್ತೇನೆ.